ಈ) ಸರ್ಕಾರವು ಆದೇಶ ಕ್ರಮಾಂಕ: ಸಿಐ:168:ಎಸ್‌ಜಿಎಫ್:98 ದಿ: 02.08.1999 ಮತ್ತು ಕ್ರ:ಸಿಐ:203:ಎಸ್‌ಜಿಎಫ್:95(ಪಿ) ದಿ: 31.03.1999 ರನ್ವಯ ಕಬ್ಬು ಬೆಳೆಗಾರರಿಗೆ ಮತ್ತು ಕಾರ್ಮಿಕರಿಗೆ ಪಾವತಿಸಲು ಬಾಕಿ ಇರುವುದನ್ನು ಕಾರ್ಖಾನೆಯಲ್ಲಿದ್ದ ಸಕ್ಕರೆ ಮಾರಾಟದಿಂದ ಬಂದ ಹಣದಲ್ಲಿ ಬರಿಸಲು ಆದೇಶವಾಗಿದ್ದು, ಅದರಂತೆ ಕ್ರಮವಿಡಲಾಗಿದೆ ಕಾರ್ಮಿಕರಿಗೆ ರೂ. 118.36 ಲಕ್ಷ ಮತ್ತು ಕಬ್ಬು ಬೆಳೆಗಾರರಿಗೆ ರೂ. 105.09 ಲಕ್ಷ ಇದುವರೆಗೆ ಪಾವತಿಸಲಾಗಿದೆ.

ಉ) ಸರ್ಕಾರದ ಅಧಿಸೂಚನೆ ಕ್ರ:ಸಿಐ:138:ಎಸ್‌ಜಿಎಫ್:97: ದಿ: 02.09.98 ರಂತೆ ಶಿವಮೊಗ್ಗ, ಭದ್ರಾವತಿ ತಾಲ್ಲೂಕ್ ವ್ಯಾಪ್ತಿಯ ಗ್ರಾಮದ ಕಬ್ಬು ಬೆಳಗಾರರು ತಾತ್ಕಾಲಿಕವಾಗಿ ಕಬ್ಬನ್ನು ಭದ್ರಾವತಿಯ ಎಂ.ಪಿ.ಎಂ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಲು ಅನುಮತಿಸಲಾಗಿದೆ.

ಶಿವಮೊಗ್ಗದಲ್ಲಿ ಸ್ಥಗಿತಗೊಂಡಿರುವ ಸಣ್ಣ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸುವ ಬಗ್ಗೆ

4157 (4602) : ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗದಲ್ಲಿ ಸಣ್ಣ ಕೈಗಾರಿಕೆಗಳು ಎಷ್ಟು ಇವೆ?

ಆ) ಇವುಗಳಲ್ಲಿ ಸ್ಥಗಿತ ಗೊಂಡಿರುವ ಸಣ್ಣ ಕೈಗಾರಿಕೆಗಳೆಷ್ಟು;

ಇ) ಇವುಗಳ ಪುನಶ್ಚೇತನಕ್ಕೆ ಸರ್ಕಾರ ಏನಾದರು ಅನುದಾನವನ್ನು ಬಿಡುಗಡೆ ಮಾಡಿದೆಯೆ; (ವಿವರ ನೀಡುವುದು)

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆಗಳ ಹಾಗೂ ಹಜ್ ಸಚಿವರು)

ಅ) 11,173

ಆ) 1,212

ಇ) ರಾಜ್ಯ ಹೊಸ ಕೈಗಾರಿಕಾ ನೀತಿ 2001–06ರನ್ವಯ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿಗೆ ಕೆಲವೊಂದು ರಿಯಾಯಿತಿ/ಸೌಲಭ್ಯಗಳನ್ನು ಘೋಷಿಸಲಾಗಿದೆ. ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನ ಕಾರ್ಯಕ್ರಮದ ನೀತಿಯನ್ವಯ ರೋಗಗ್ರಸ್ಥ ಕೈಗಾರಿಕೆಗಳಿಗೆ ಕೆಲವು ರಿಯಾಯಿತಿ ಹಾಗೂ ಪರಿಹಾರ ನೀಡಲಾಗುವುದು. ಶಿವಮೊಗ್ಗ ಜಿಲ್ಲೆಯಲ್ಲಿ 15 ರೋಗಗ್ರಸ್ಥ ಕೈಗಾರಿಕೆಗಳಿಗೆ ರೂ. 9.785 ಲಕ್ಷ ಬೀಜಧನ ಸಾಲ ನೀಡಿ ಪುನಶ್ಚೇತನಗೊಳಿಸಲಾಗಿದೆ.

ಶಿವಮೊಗ್ಗದ ಕೆ.ಎಂ.ಎಫ್.ನ ಆದಾಯ

4158 (4603) : ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಧಾರವಾಡ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಕೆ.ಎಂ.ಎಫ್.ನಲ್ಲಿ ಪ್ರತಿ ತಿಂಗಳೂ ಸಂಗ್ರಹ ಮಾಡುವ ಹಾಲು ಎಷ್ಟು; ಇದರ ಆದಾಯವೆಷ್ಟು;

ಆ) ಸಂಗ್ರಹಿಸಲು ಖರ್ಚುಮಾಡುವ ಹಣವೆಷ್ಟು

ಇ) ಈ ಫೆಡರೇಷನ್ ಲಾಭದಲ್ಲಿ ನಡೆಯುತ್ತಿದೆಯೇ ಅಥವಾ ನಷ್ಟದಲ್ಲಿ ನಡೆಯುತ್ತಿದೆಯೇ;

ಈ) ನಷ್ಟದಲ್ಲಿ ನಡೆಯುತ್ತಿದ್ದರೆ ಸರ್ಕಾರವು ಈ ನಷ್ಟವನ್ನು ಸರಿಪಡಿಸಲು ಯಾವ ಕ್ರಮ ಕೈಗೊಂಡಿದೆ.

ಉ) ಲಾಭದಲ್ಲಿ ನಡೆಯುತ್ತಿದ್ದರೆ ಹಾಲಿನ ದರವನ್ನು ಹೆಚ್ಚಿಸುವ ಅವಶ್ಯಕತೆ ಇದೆಯೆ: (ಅಂಕಿ ಅಂಶಗಳನ್ನು ದಿನಾಂಕ: 1.4.2002 ರಿಂದ 31.3.2003ರ ವರೆಗೆ ನೀಡುವುದು)

ಊ) ಹಾಲಿ ಖಾಲಿ ಇರುವ ಹುದ್ದೆಗಳಾವುವು ಮಾಹಿತಿ ಒದಗಿಸುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಶಿವಮೊಗ್ಗ ಹಾಲು ಒಕ್ಕೂಟದಲ್ಲಿ 2002–03ನೇ ಸಾಲಿನಲ್ಲಿ ಸರಾಸರಿ ಪ್ರತಿ ತಿಂಗಳು ಸುಮರು 47.63 ಲಕ್ಷ ಕೆ.ಜಿ. ಹಾಲನ್ನು ಸಂಗ್ರಹಣೆ ಮಾಡಲಾಗಿದೆ.

2002–03ನೇ ಸಾಲಿನಲ್ಲಿ ಸರಾಸರಿ ಪ್ರತಿ ತಿಂಗಳು ಹಾಲು ಮತ್ತು ಹಾಲು ಉತ್ಪನ್ನಗಳ ಮಾರಾಟದಿಂದ ಸುಮಾರು ರೂ. 0.54 ಲಕ್ಷ ಲಾಭ ಬಂದಿರುತ್ತದೆ.

ಆ) ಹಾಲು ಸಂಗ್ರಹಣೆಗಾಗಿ ಪ್ರತಿ ತಿಂಗಳು ಸುಮಾರು ಸರಾಸರಿ ರೂ. 29.42 ಲಕ್ಷ ವೆಚ್ಚವಾಗುತ್ತಿದೆ. ಅಂದರೆ ಪ್ರತಿ ಕೆ.ಜಿ. ಹಾಲು ಸಂಗ್ರಹಣೆಗೆ ರೂಪಾಯಿ 0.62 ವೆಚ್ಚವಾಗುತ್ತಿದೆ.

ಇ) ಶಿವಮೊಗ್ಗ ಹಾಲು ಒಕ್ಕೂಟವು ಲಾಭದಲ್ಲಿ ನಡೆಯುತ್ತಿದೆ. 2002–03ನೇ ಸಾಲಿನಲ್ಲಿ ರೂ. 6.49 ಲಕ್ಷ (ತಾತ್ಕಾಲಿಕ) ಲಾಭ ಗಳಿಸಿರುತ್ತದೆ. ಕ್ರೋಢೀಕೃತ ಲಾಭಪೂರ್ವ–03ರ ಅಂತ್ಯಕ್ಕೆ ರೂ.12.00 ಲಕ್ಷ ಇರುತ್ತದೆ.

ಈ) ಉದ್ಭವಿಸುವುದಿಲ್ಲ.

ಉ) ಒಕ್ಕೂಟವು ಹಾಲು ಶೇಖರಣೆ ಪ್ರಮಾಣ, ಮಾರಾಟದ ಪ್ರಮಾಣ, ಪರಿವರ್ತನೆಗೆ ಕಳುಹಿಸುವ ಪ್ರಮಾಣ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ ಕಾಲಕಾಲಕ್ಕೆ ಹಾಲು ಉತ್ಪಾದಕರಿಂದ ಕೊಳ್ಳುವ ಹಾಲಿನ ದರವನ್ನು ಪರಿಷ್ಕರಿಸುತ್ತದೆ. 2002–03ನೇ ಸಾಲಿನಲ್ಲಿ ನೀಡಿರುವ ಖರೀದಿ ದರಗಳ ವಿವರ ಈ ಕೆಳಕಂಡಂತಿವೆ:

ಅವಧಿ	ಸಂಘಗಳಿಂದ ಖರೀದಿಸುವ ಹಾಲಿನ ದರ ಪ್ರತಿ ಕೆ.ಜಿ.ಗೆ (ಶೇ. 3.5 ಜಿಡ್ಡು ಮತ್ತು ಶೇ 8.5 ಜಿಡ್ಡೇತನ ಘನ ಪದಾರ್ಥ)
1–4–2002 ರಿಂದ 30–6–2002	ರೂ. 9.05
1–7–2002 ರಿಂದ 22–7–2002	ರೂ. 8.45
23–7–2002 ರಿಂದ 14–9–2002	ರೂ. 9.05
15–9–2002 ರಿಂದ 2–11–2002	ರೂ. 8.45
3–11–2002 ರಿಂದ 31–2–3002	ರೂ. 7.75
1–4–2003 ರಿಂದ	ರೂ. 8.40

ಊ) ಹಾಲಿ ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ:

ಹುದ್ದೆಗಳ ಪದನಾಮ		ಒಟ್ಟು ಖಾಲಿ ಇರುವ ಹುದ್ದೆಗಳ ಸಂಖ್ಯೆ
ಉಪ ವ್ಯವಸ್ಥಾಪಕರು (ಮಾರುಕಟ್ಟೆ) (1)		
ಉಪ ವ್ಯವಸ್ಥಾಪಕರು (ಹಣಕಾಸು) (1)	:	2
ಸಹಾಯಕ ವ್ಯವಸ್ಥಾಪಕರು (ಮಾರುಕಟ್ಟೆ) (3)		
ಪಶುವೈದ್ಯಾಧಿಕಾರಿಗಳು (4)		
ಸಹಾಯಕ ವ್ಯವಸ್ಥಾಪಕರು (ಪ್ರೋಸೆಸ್ (1)	:	8
ಆಡಳಿತಾಧಿಕಾರಿಗಳು (1)		1

ತಾಂತ್ರಿಕ ಅಧಿಕ್ಷಕರು (2)	2	
ಸ್ಟೋರ್ ಸೂಪರ್ ವೈಸರ್ (2)	2	
ವಿಸ್ತರಣಾಧಿಕಾರಿಗಳು ದರ್ಜೆ–III (10)		
ಎಂ.ಐ.ಎಸ್. ಅಸಿಸ್ಟೆಂಟ್ (1)		
ಸೀನಿಯರ್ ಅಸಿಸ್ಟೆಂಟ್ (1)		
ಡೈರಿ ಸೂಪರ್ ವೈಸರ್ (2)	14	
ಕಂಪ್ಯೂಟರ್ ಆಪರೇಟರ್ (2)		
ಕೆಮಿಸ್ಟ್ ದರ್ಜೆ–II(1)		
ಡೈರಿ ಟೆಕ್ನಿಷಿಯನ್ ದರ್ಜೆ–I(2)		
ಆಡಳಿತ ಸಹಾಯಕ ದರ್ಜೆ–II(1)		
ಮಾರುಕಟ್ಟೆ ಸಹಾಯಕ ದರ್ಜೆ–II(2)	8	
ಡೇರಿ ಟೆಕ್ನಿಷಿಯನ್ (6)	6	
ಆಡಳಿತ ಸಹಾಯಕ ದರ್ಜೆ–III(3)		
ಲೆಕ್ಕ ಸಹಾಯಕ ದರ್ಜೆ–III(1)		
ಲ್ಯಾಬ್ ಟೆಕ್ನಿಷಿಯನ್ (2)		
ಬೆರಳಚ್ಚುಗಾರರು (3)		
ಚಾಲಕರು (1)	10	
ಒಟ್ಟು		53

ಬ್ಯಾಕ್‌ಲಾಗ್ ಹುದ್ದೆಗಳ ವಿವರ

4159 (4604) : ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ಭರ್ತಿಮಾಡಲು ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳೆಷ್ಟು: (A,B,C,D ಹುದ್ದೆವಾರು ವಿವರ ನೀಡುವುದು)

ಆ) ಈ ಬ್ಯಾಕ್‌ಲಾಗ್ ಹುದ್ದೆಗಳು ಭರ್ತಿಮಾಡದೇ ಇರಲು ಕಾರಣವೇನು;

ಇ) ನೇರನೇಮಕಾತಿ ಮಾಡಿಕೊಳ್ಳುವಾಗ ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಿಲ್ಲವೆ, ಇಲ್ಲದೆ ಇದ್ದಲ್ಲಿ ಕಾರಣಗಳೇನು ಕಳೆದ 3 ವರ್ಷಗಳಲ್ಲಿ ನೇರ ನೇಮಕಾತಿ ಮಾಡಿಕೊಳ್ಳಲಾದ A.B.C.D ಹುದ್ದೆವಾರು ವಿವರ ನೀಡುವುದು?

ಶ್ರೀ ವಿ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ದಿನಾಂಕ: 23.7.2003ರಲ್ಲಿದಂತೆ ವಿವಿಧ ಸರ್ಕಾರಿ ಇಲಾಖೆ ನಿಗಮ/ಮಂಡಳಿ/ವಿಶ್ವವಿದ್ಯಾನಿಲಯಗಳು/ಸಹಕಾರಿ ಸಂಸ್ಥೆಗಳು/ಅನುದಾನಿತ ಸಂಸ್ಥೆಗಳಲ್ಲಿ ಗುರುತಿಸಿದ ಒಟ್ಟು ಬ್ಯಾಕ್‌ಲಾಗ್ ಹುದ್ದೆಗಳು 16994 (ಪ.ಜಾತಿ–12896, ಪ.ವರ್ಗ–4098) ಅದರಲ್ಲಿ ಸರ್ಕಾರಿ ಇಲಾಖೆಗಳಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ 12021 (ಪ.ಜಾತಿ 9258 + ಪ.ವರ್ಗ–2763) (A.B.C.D ಹುದ್ದೆವಾರು ವಿವರ ಲಗತ್ತಿಸಿದೆ.)